ಸುಶೀಲ ಎಸ್. ಪಾಟೀಲ, ಸಂಕೇಶ್ವರ
ದುಡ್ಡಿದ್ದವನು ದೊಡ್ಡಪ್ಪನಾದರೆ ಚಿಕ್ಕಪ್ಪ ಯಾರು?



ಎಂದಾದರೂ ಕ್ಯಾಶ್ ಆಗಬಹುದಾದ ಚೆಕ್ ಇದ್ದವನೇ ಚಿಕ್ಕಪ್ಪ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಮಾನವರು ಹೊತ್ತುಕೊಂಡು ಓಡಾಡುತ್ತಿರುವ ಬಹು ದೊಡ್ಡ ಸಮಸ್ಯೆ ಯಾವುದು?
ಸ್ವಪ್ರತಿಷ್ಠೆ.

ಸಿ.ಎನ್. ನಾಗರಾಜ್, ಬೆಂಗಳೂರು
ಶಿವನಿಗೆ ಇಬ್ಬರು ಹೆಂಡಿರಿದ್ದರೂ ದ್ವಿಪತ್ನಿತ್ವ ಅಪರಾಧವೆಂದೇಕೆ ಯಾರೂ ಕೇಸ್ ಹಾಕಿಲ್ಲ?
ಕೇಸ್ ಶಿವನ ಜ್ಯೂರಿಡಿಕ್ಷನ್ನಲ್ಲೇ ನಡೆಯಬೇಕು. ಕೈಲಾಸಕ್ಕೆ ಹೋಗಲು ಯಾವ ಲಾಯರ್ರೂ ತಯಾರಿಲ್ಲ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಡೊಳ್ಳು ಬಾರಿಸುವವರ ಮುಂದೆ ವೀಣೆಯ ಶಬ್ದ ಕೇಳುವುದಿಲ್ಲವೇಕೆ?



ಬಾಯಿಬಡುಕರೊಡನೆ ಸ್ಪರ್ಧೆಗಿಳಿದಂತೆ ಧ್ವನಿಯೇರಿಸದಿರುವುದು ಸಭ್ಯತೆಯ ಲಕ್ಷಣ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಪಕ್ಷಾಂತರ ರಂಪಾಟ ನೋಡಿದರೆ ಬರುವ ಚುನಾವಣೆಯಲ್ಲಿ ಮತ ಹಾಕಲು ವ್ಯಕ್ತಿಯನ್ನು ಗಮನಿಸಲೇ ? ಪಕ್ಷವ ಗಮನಿಸಲೇ ?
ಪಕ್ಷವನ್ನೇ. ವ್ಯಕ್ತಿ ಟೆಂಪೊರರಿ, ಪಕ್ಷ ಪರ್ಮನೆಂಟು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ದ್ರೌಪದಿಯು ಸೀರೆಯ ಬದಲು ಚೂಡಿದಾರ್ ಧರಿಸಿದ್ದರೆ ದುಶ್ಶಾಸನ, ಶ್ರೀಕೃಷ್ಣರು ಏನು ಮಾಡುತ್ತಿದ್ದರು?
ದುಶ್ಶಾಸನ ಬಟ್ಟೆ ಹರಿಯಲು ಕತ್ತರಿ ತರುತ್ತಿದ್ದ. ಶ್ರೀಕೃಷ್ಣ ಕತ್ತರಿಯನ್ನು ಮೊಂಡಾಗಿಸುತ್ತಿದ್ದ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕೆಲವರಿಗೆ ಎಂಥ ಕಾಯಿಲೆ ಬಂದರೂ ಅತಿ ಶೀಘ್ರವೇ ಗುಣವಾಗಿಬಿಡುವ ಕಾರಣ?
ಪಥ್ಯವನ್ನು ಪಾಲಿಸುತ್ತಾರೆ. ಅಪಥ್ಯಸ್ಯ ಗತಿಃ Nasty.

ಬಿ. ಚಂದ್ರೇಗೌಡ, ಬೆಂಗಳೂರು
ಸೆಲೆಬ್ರಿಟಿಗಳನ್ನು ಆರಾಧಿಸುವುದಕ್ಕೂ, ದೇವರನ್ನು ಆರಾಧಿಸುವುದಕ್ಕೂ ಏನು ವ್ಯತ್ಯಾಸ?
ಸೆಲೆಬ್ರಿಟಿಗಳ ಆರಾಧಕರು ಅವರ ಸಮೀಪ ಹೋಗಲು ಬಯಸುತ್ತಾರೆ. ಆದರೆ...

ಬಿ.ಆರ್. ಉಷಾ, ಕೆನಡಾ
ಭಿಕ್ಷೆ ಬೇಡುವವ ಭಿಕ್ಷುಕ. ಮತ ಬೇಡುವವ?
ಸಿಕ್ಕಿದ್ದೆಲ್ಲ ಮುಕ್ಕುವ ಮುಕ್ಕಣ್ಣ.

ವಿ. ಹೇಮಂತಕುಮಾರ್, ಬೆಂಗಳೂರು
ಕೈಲಾಗದ ಶತ್ರುವಿನ ಕೊನೆಯ ಅಸ್ತ್ರ ಅಪಪ್ರಚಾರವಂತೆ. ಹೌದಾ ಸರ್?
ಟಿಆರ್‌ಪಿ ದಾಸರಾದ ವಾಹಿನಿಗಳದೂ ಅದೇ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಗಂಗಾನದಿಯಲ್ಲಿ ಸ್ನಾನ ಮಾಡಿದರೆ ಪಾಪಗಳು ಹೋಗಿಬಿಟ್ಟರೆ ಯಮನಿಗೇನು ಕೆಲಸ?
ಚಿಂತೆಯಿಲ್ಲ. ನದಿಯಿಂದ ದೇಗುಲಕ್ಕೆ ಬರುವಷ್ಟರಲ್ಲಿ ದುರ್ಯೋಚನೆಗಳ ಸಾಲೇ ಮೂಡಿರುತ್ತದೆ.

ಅನಸೂಯ ಟಿ, ಕೇದಿಗೆಮನೆ
ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಲು ಯಾವ ಕಾನೂನನ್ನು ಜಾರಿಗೆ ತಂದರೆ ಒಳ್ಳೆಯದು?
ತರಬೇಕಾದ್ದು ಕಾನೂನನ್ನಲ್ಲ, ಜಾರಿಗೊಳಿಸಬಲ್ಲ ಶಕ್ತರನ್ನು. ನಮ್ಮಲ್ಲಿ ಅಂತಹ ಶಕ್ತರಿಲ್ಲ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಅರಬ್ ದೊರೆಗಳು ವಿಶ್ವದಲ್ಲೇ ಅತಿ ಶ್ರೀಮಂತರು. ಹಾಗಿದ್ದರೂ ಸರಳ ವಸ್ತ್ರವನ್ನು ಧರಿಸುವರಲ್ಲ, ಏಕೆ?
ಮರಳುಗಾಡಿನಲ್ಲಿ ವಿಶೇಷ ವಸ್ತ್ರಗಳನ್ನು ಒಗೆಯುವಷ್ಟು ನೀರು ಸಿಗುವುದಿಲ್ಲವಂತೆ.

## ವಾರದ ಪ್ರಶ್ನೆ

ವಿಜಯಾ ಪ್ರಸಾದ್, ಬೆಂಗಳೂರು
ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಅನ್ನುವಂತೆ ರಾಜಕಾರಣಿಗಳು ನಮ್ಮ ದುಡ್ಡನ್ನು ನಮಗೆ ಕೊಟ್ಟು 'ನಾನು ಕೊಟ್ಟೆ' ಅನ್ನುವರಲ್ಲಾ?
ಅವರಂದಿದ್ದು 'ಕೊಟ್ಟೆ' ಅಲ್ಲ, ಖೊಟ್ಟೆ – ಅವರ ಗುಣಪರಿಚಯ!

ವಿ. ಹಮೀದ್, ವಿಟ್ಲ
ಪರರ ದೂಷಣೆಯಲ್ಲಿಯೇ ತಲ್ಲೀನರಾಗುವವರಿಗೆ ನಿಮ್ಮ ಹಿತವಚನವೇನು ಸಾರ್?
ದೂಷಿಸುವುದರಲ್ಲೂ ನಾವೀನ್ಯ ತೋರಿಸಿ.

ಕವಿತಾ ವೆಂಕಟೇಶ್
ಗ್ರಹಣವನ್ನು ವೈಜ್ಞಾನಿಕವಾಗಿ ನಂಬಲು ಸಾಧ್ಯ. ಆದರೆ ಗ್ರಹಚಾರವನ್ನು ನಂಬುವುದು ಹೇಗೆ?
ಚಾರ=ಚಲನೆ; ಚುನಾವಣೆ ಸಮೀಪಿಸಿತಲ್ಲ, ಗ್ರಹಗಳು ಓಡಾಡುವುದು ಸ್ಪಷ್ಟವಾಗಿ ಕಾಣುತ್ತದೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯ ನಗದೇ ಇದ್ದಿದ್ದರೆ ಏನಾಗುತ್ತಿತ್ತು ಸರ್?



ಇಂತಹ ಅಂಕಣಗಳು ಹುಟ್ಟುತ್ತಲೇ ಇರಲಿಲ್ಲ.

ವಾಣಿ, ಮೈಸೂರು
ಕಾಯಕವೇ ಕೈಲಾಸಾನೋ, ಕಾಸಿದ್ರೆ ಕೈಲಾಸಾನೋ?
ಸಂಪಾದನೆಗೆ ಮಾರ್ಗವಾದ ಕಾಯಕವೇ ಕೈಲಾಸ; ಬಿಟ್ಟಿ ಚಾಕರಿ ಕೈಸಾಲ.

ಕೆ. ಹೊನ್ನಪ್ಪ. ಕ್ಯಾತ್ಸಂದ್ರ
ನನಗೆ ಅತ್ಯಂತ ಪ್ರಿಯವಾದದ್ದು ಯಾವುದು ಹೇಳ್ತೀರಾ?
'ಹೊನ್ನಪ್ಪ ಅಂದ್ರೆ ಹೊನ್ನು' ಎಂದು ಕರೆಸಿಕೊಳ್ಳುವುದು.

■ ರಾಮ್